ಅಥವಾ ಯುವತಿಯನ್ನು ತಂದು ಕೂರಿಸುತ್ತಾರೆ. ಇನ್ನು ಕೆಲವೊಮ್ಮೆ ಹಿರಿಯ ಅಧಿಕಾರಿಗಳನ್ನು ಸಾಕಷ್ಟು ಗೌರವದಿಂದಲೆ 'ಬೆಂಚ್' ಮೇಲೆ ಕೂರಿಸುತ್ತಾರೆ. ಬೆಂಚ್ ಅಂದರೆ ಅಂದರೆ ಬೆಂಚೇ ಅಲ್ಲ; ಅದೂ ತಿರುಗುವ ಕುರ್ಚಿಯೇ ಆಗಿರುತ್ತದೆ. ಆದರೆ, ಕೆಲಸವಿಲ್ಲ, ಹಾಗೆಂದು ಕೆಲಸದಿಂದ ತೆಗೆದು ಹಾಕುವಂತೆಯೂ ಇಲ್ಲ. ಅಂಥ ಧೋರಣೆಯನ್ನು ನಮ್ಮ ಸರಕಾರಿ ಇಲಾಖೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಪೊಲೀಸ್ ಇಲಾಖೆಯಲ್ಲಿ ನಾವು ಪದೇಪದೇ ಕಾಣುತ್ತೇವೆ.

ಪಡ್ಡುವನ್ನು ಬೇಯಿಸುತ್ತಿದ್ದ ತಮಿಳಮ್ಮ ಈಗ ಆ ಕೊನೆಯ ಕಕ್ಷೆಯಲ್ಲಿ ವಿಶ್ರಾಂತ ಸ್ಥಿತಿಯಲ್ಲಿದ್ದ ಕಂದು ಪಡ್ಡುಗಳನ್ನು ಮೆಲ್ಲಗೆ ಹೊರಳಿಸಿ ಒಳಗಿನ ಕಕ್ಷೆಗೆ ಎಳೆದು ಹಾಕಿ, ಅದಕ್ಕೆ ತುಸು ಜಾಸ್ತಿ ಶಾಖ ಸಿಗುವಂತೆ ಮಾಡತೊಡಗಿದ್ದಳು. ಬಹುಶಃ ನನ್ನ ತಟ್ಟೆಗೆ ಹಾಕಲೆಂದೇ ಆ ಸಿದ್ಧತೆ ನಡೆದಿರಬೇಕು.

ತಮಾಷೆ ಏನು ಗೊತ್ತೆ? ಬಾಹ್ಯಾಕಾಶದಲ್ಲೂ ಈಗೀಗ ಅದನ್ನೇ ಮಾಡುತ್ತಿದ್ದಾರೆ. ಗ್ರೇವ್‌ಯಾರ್ಡ್ ಆರ್ಬಿಟ್‌ಗೆ, ಯಾನೆ ವಿಶ್ರಾಂತಿ ಕಕ್ಷೆಗೆ ಹೋಗಿ ಕೂತಿದ್ದ 'ಇಂಟೆಲ್‌ಸ್ಯಾಟ್ 901' ಹೆಸರಿನ ಅಮೆರಿಕದ ಹಳೇ ಉಪಗ್ರಹವನ್ನು ಎಳೆದು ಮತ್ತೆ ಜೀವಂತ ಕಕ್ಷೆಯಲ್ಲಿ ಕೂರಿಸಿದ್ದಾರೆ. ಅದೊಂದು ಅಪರೂಪದ ಸಾಧನೆ ಎಂದು 'ನಾಸಾ' ಅಧಿಕಾರಿಗಳು ಹೇಳಿಕೊಂಡಿದ್ದಾರೆ. ಈಗ ಮತ್ತೆ ಪೊಲೀಸ್ ಇಲಾಖೆಯನ್ನು ನೆನಪಿಸಿಕೊಳ್ಳಿ. ಯಾವುದೋ ಸಚಿವರ ಅವಕೃಪೆಗೆ ಒಳಗಾಗಿ, ಅಗ್ನಿಶಾಮಕ ದಳಕ್ಕೋ ಅಥವಾ ಸಿಬ್ಬಂದಿ ತರಬೇತಿ ವಿಭಾಗಕ್ಕೋ ವರ್ಗವಾಗಿ ಮುದುಡಿ ಕೂತಿದ್ದ ದಕ್ಷ ಅಧಿಕಾರಿಗೆ ಹೊಸ ಸಂಪುಟದ ಸಚಿವರು ಬಡ್ತಿ ಕೊಟ್ಟು, ಥಳಥಳಿಸುವ ಕುರ್ಚಿಯಲ್ಲಿ (ಅಂದರೆ ಹಾಟ್ ಸೀಟ್‌ನಲ್ಲಿ) ಕೂರಿಸುತ್ತಾರೆ ತಾನೆ? ಇನ್ನೊಂದು ರೂಪಕ ಬೇಕೆಂದರೆ, ನಿವೃತ್ತಿಯಾಗಿ ಪಾರ್ಕಿನ ಬೆಂಚಿನಲ್ಲಿ ಕೂತಿದ್ದ ಹಿರಿಯರೊಬ್ಬರನ್ನು ಕಾರಕೂನಿಕೆಯ ಕೆಲಸಕ್ಕೆಂದು ಅಲ್ಪ ಸಂಬಳಕ್ಕೆ ಮತ್ತೆ ನೇಮಕ ಮಾಡಿಕೊಳ್ಳುತ್ತಾರೆ ತಾನೆ?

ಅದೋ ಬಂತು, ವಿಶ್ರಾಂತ ಸ್ಥಿತಿಯಲ್ಲಿ ಕಾವಲಿಯ ಕೊನೇ ಕಕ್ಷೆಯಲ್ಲಿ ಮುದುಡಿ ಕೂತಿದ್ದ ಪಡ್ಡು ಈಗ ಮತ್ತೆ ಬಿಸಿ ಬಿಸಿಯಾಗಿ ನನ್ನ ತಟ್ಟೆಗೆ ಬಂತು. ಬಾಹ್ಯಲೋಕದಲ್ಲಿದ್ದ ನನ್ನನ್ನು ಘಮ್ಮೆಂದು ಪಾಂಡಿಚೇರಿಯ ಪಾದಚಾರಿ ರಸ್ತೆಗೆ ಎಳೆದು ತಂತು.

## ನಾಗೇಶ ಹೆಗಡೆ

ಪತ್ರಕರ್ತ, ಪರಿಸರವಾದಿ, ವಿಜ್ಞಾನ ಬರಹಗಳ ಲೇಖಕ ನಾಗೇಶ ಹೆಗಡೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದ ಬಕ್ಕೆಮನೆ ಎಂಬ ಹಳ್ಳಿಯವರು. 'ಪ್ರಜಾವಾಣಿ'ಯಲ್ಲಿ ಸುಮಾರು 38 ವರ್ಷಗಳಷ್ಟು ದೀರ್ಘ ಕಾಲದಿಂದ ಪ್ರಕಟವಾಗುತ್ತಿರುವ 'ವಿಜ್ಞಾನ ವಿಶೇಷ' ಅಂಕಣದಲ್ಲಿ ವಿಜ್ಞಾನ ಕ್ಷೇತ್ರದ ವಿದ್ಯಮಾನಗಳನ್ನು ಸ್ವಾರಸ್ಯಕರವಾಗಿ ಬರೆಯುತ್ತ ಬಂದಿದ್ದಾರೆ. ಅವರ ಮೊದಲ ಪುಸ್ತಕ 'ಇರುವುದೊಂದೇ ಭೂಮಿ' ಪರಿಸರಕ್ಕೆ ಸಂಬಂಧಿಸಿದಂತೆ ಅನೇಕ ಚರ್ಚೆಗಳನ್ನು ಹುಟ್ಟುಹಾಕಿದೆ. 40ಕ್ಕೂ ಹೆಚ್ಚು ವಿಜ್ಞಾನ/ಪರಿಸರ ಬರಹಗಳ ಪುಸ್ತಕಗಳನ್ನು ಬರೆದಿರುವ ಅವರು, 'ಹಳ್ಳೀಮುಕ್ಕ ಎಲ್ಲೆಲ್ ಹೊಕ್ಕ' ಹೆಸರಿನ ಲಘುಪ್ರಬಂಧ ಸಂಕಲನವನ್ನೂ, ಮಕ್ಕಳಿಗಾಗಿ 'ಕೆರೆಯಲಿ ಚಿನ್ನ, ಕೆರೆಯೇ ಚಿನ್ನ' ಎಂಬ ಪುಸ್ತಕವನ್ನೂ ಪ್ರಕಟಿಸಿದ್ದಾರೆ. ಕನ್ನಡ ಮಕ್ಕಳ ಸಾಹಿತ್ಯಕ್ಕೆ ಬಿಗ್‌ಲಿಟ್ಲ್ ಬುಕ್ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಗಾಂಧೀ ತತ್ತ್ವಚಿಂತನೆಗಳನ್ನು ಪ್ರತಿಪಾದಿಸುವ ಕನ್ನಡ ಸಾಹಿತ್ಯ ಕೃತಿಗೆ ನೀಡುವ 'ಸಿದ್ದವನಹಳ್ಳಿ ಕೃಷ್ಣ ಶರ್ಮ ಪ್ರಶಸ್ತಿ' ಈ ಲೇಖಕರ 'ಭೂಮಿಯೆಂಬ ಗಗನನೌಕೆ' ಹೆಸರಿನ ಪುಸ್ತಕಕ್ಕೆ ಲಭಿಸಿದೆ.